FEBRUARY 06, 2026

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

**ಮುಖ್ಯಾಂಶಗಳು**

<><><>

- **ಬೆಂಗಳೂರಿನಲ್ಲಿ, ಇಂದಿನಿಂದ ಮೂರು ದಿನ,** ಸಿರಿಧಾನ್ಯ ಹಾಗೂ ಸಾವಯವ ಕೃಷಿಕರ ಮೇಳ.
- **9ನೇ ಆವೃತ್ತಿಯ, '**ಪರೀಕ್ಷಾ ಪೇ ಚರ್ಚಾ'; ಇಂದು ಬೆಳಗ್ಗೆ 10 ಗಂಟೆಗೆ, ಪ್ರಸಾರ.
- **ಎನ್.ಸಿ.ಸಿ., ಶಿಸ್ತು ಮತ್ತು ರಾಷ್ಟ್ರ** ಪ್ರೇಮದ ಪ್ರತೀಕ – ರಾಜ್ಯಪಾಲ ಥಾವರಚಂದ್ ಗೆಹ್ಲೋಟ.
- **ಪ್ರೀಮಿಯರ್ ಲೀಗ್ ಟಿ–20 ಕ್ರಿಕೆಟ್;** ರಾಯಲ್ ಚಾಲೆಂಜರ್ಸ್ ಬೆಂಗಳೂರು, ವನಿತೆಯರ ತಂಡಕ್ಕೆ ಜಯ.

<><><>

**ಈಗ ವಾರ್ತೆಗಳ ವಿವರ**

<><><>

**ಕೃಷಿಯಲ್ಲಿ ಯಂತ್ರೋಪಕರಣ ಬಳಕೆಗೆ ಉತ್ತೇಜನ** ನೀಡಲು, ಕಳೆದ ಎರಡೂವರೆ ವರ್ಷಗಳಲ್ಲಿ, ರಾಜ್ಯ ಸರ್ಕಾರ, ಸಾವಿರದ ಐನೂರು ಕೋಟಿ ರೂಪಾಯಿ, ಸಹಾಯಧನ ವಿತರಿಸಿದೆ ಎಂದು, ಕೃಷಿ ಖಾತೆ ಸಚಿವ, ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ. 'ಉತ್ಪಾದನೋತ್ತರ ಕೃಷಿ; ರೈತರ ಸಬಲೀಕರಣ' ಧ್ಯೇಯದೊಂದಿಗೆ, ಇಂದಿನಿಂದ ಮೂರು ದಿನಗಳ ಕಾಲ, ಬೆಂಗಳೂರಿನ ಅರಮನೆ ಮೈದಾನದ, ತ್ರಿಪುರವಾಸಿನಿ ಸಭಾಂಗಣದಲ್ಲಿ, ಸಿರಿಧಾನ್ಯ ಹಾಗೂ ಸಾವಯವ ವಾಣಿಜ್ಯ ಮೇಳ ಆಯೋಜಿಸಲಾಗಿದೆ, ಎಂದರು. 18 ಜನ ರೈತರಿಗೆ, ಕೃಷಿ ಪಂಡಿತ ಹಾಗೂ 104 ಜನ ರೈತರಿಗೆ, ಕೃಷಿ ಪ್ರಶಸ್ತಿಗಳನ್ನು, ಮುಖ್ಯಮಂತ್ರಿ ಇಂದು ಬೆಳಗ್ಗೆ 11 ಗಂಟೆಗೆ, ಪ್ರದಾನಿಸಿ, ಗೌರವಿಸಲಿದ್ದಾರೆ ಎಂದು, ಸಚಿವ ಚಲುವರಾಯಸ್ವಾಮಿ, ಹೇಳಿದರು.

<><><>

**ಎನ್.ಚಲುವರಾಯಸ್ವಾಮಿ ಧ್ವನಿ 40 ಸೆಕೆಂದುಗಳು**

<><><>

**ಕಲ್ಯಾಣ ಕರ್ನಾಟಕ,** ಪ್ರದೇಶಾಭಿವೃದ್ಧಿ ಮಂಡಳಿಯ, ಮ್ಯಾಕ್ರೋ ಯೋಜನೆಯಡಿ, 1 ಕೋಟಿ 97 ಲಕ್ಷ ರೂಪಾಯಿ ವೆಚ್ಚದಲ್ಲಿ, 4 ಡ್ರೋನ್ ಸಿಂಪರಣೆ ಕೇಂದ್ರಗಳನ್ನು, ಕಮಲಾಪುರ, ಅಫಜಲಪುರ, ಸೇಡಂ ಹಾಗೂ ಚಿತ್ತಾಪುರದಲ್ಲಿ ಸ್ಥಾಪಿಸಲಾಗಿದೆ ಎಂದು, ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ. ಕೃಷಿ ಭೂಮಿಯಲ್ಲಿ, ಕಾರ್ಮಿಕರ ಕೊರತೆ ನೀಗಲಿದೆ. ಬೆಳೆ ಸಂರಕ್ಷಣೆ ಹಾಗೂ ಪರಿಸರ ಸಂರಕ್ಷಣೆಯಲ್ಲಿ, ಕಡಿಮೆ ರಾಸಾಯನಿಕಗಳ ಬಳಕೆಗೆ, ಡ್ರೋನ್‌ಗಳು ಸಹಕಾರಿಯಾಗಲಿವೆ, ಎಂದಿದ್ದಾರೆ.

<><><>

**9ನೇ ಆವೃತ್ತಿಯ,** 'ಪರೀಕ್ಷಾ ಪೇ ಚರ್ಚಾ' ಕಾರ್ಯಕ್ರಮ ಇಂದು ಬೆಳಗ್ಗೆ 10 ಗಂಟೆಗೆ, ಪ್ರಸಾರವಾಗಲಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ, ಈ ಬಾರಿ, ದೇವಮೊಗ್ರ, ಕೊಯಮತ್ತೂರು, ರಾಯಪುರ, ಗುವಾಹತಿ ಮತ್ತು ಹೊಸ ದಿಲ್ಲಿಯ, ಸಾಥ್ ಕಲ್ಯಾಣಮಾರ್ಗದಲ್ಲಿ, ಪರೀಕ್ಷಾರ್ಥಿಗಳೊಂದಿಗೆ, ವಿಶೇ ಸಂವಾದ ನಡೆಸಿದ್ದಾರೆ. 4 ಕೋಟಿ 50 ಲಕ್ಷ 13 ಸಾವಿರದ 379 ಜನ ತಮ್ಮ ಹೆಸರು ನೋಂದಾಯಿಸಿದ್ದಾರೆ. ಆ ಪೈಕಿ, 4 ಕೋಟಿ 19 ಲಕ್ಷದ 14 ಸಾವಿರದ 56 ವಿದ್ಯಾರ್ಥಿಗಳು, 24 ಲಕ್ಷ 84 ಸಾವಿರದ 259 ಶಿಕ್ಷಕರು ಹಾಗೂ 6 ಲಕ್ಷ 15 ಸಾವಿರದ 64 ಪಾಲಕರು, 'ಪರೀಕ್ಷಾ ಪೇ ಚರ್ಚಾ'ದಲ್ಲಿ ಪಾಲ್ಗೊಳ್ಳಲು, ಹೆಸರು ನೋಂದಾಯಿಸಿದ್ದಾರೆ.

<><><>

**ಕೇಂದ್ರ ಶಿಕ್ಷಣ ಖಾತೆ ಸಚಿವ,** ಧರ್ಮೇಂದ್ರ ಪ್ರಧಾನ್ ನೇತೃತ್ವದಲ್ಲಿ, ಶಿಕ್ಷಣ ಸಚಿವಾಲಯ, 'ಪರೀಕ್ಷಾ ಪೇ ಚರ್ಚಾ' ಕಾರ್ಯಕ್ರಮ ಆಯೋಜಿಸಿದ್ದು, ಮಕ್ಕಳಲ್ಲಿ ಪರೀಕ್ಷಾ ಭಯ ಹೋಗಲಾಡಿಸಿ, ಮನೋಬಲ ಹೆಚ್ಚಿಸುವ ಉದ್ದೇಶ ಹೊಂದಿದೆ.

<><><>

**ಪರೀಕ್ಷಾ ಪೇ ಚರ್ಚಾದಲ್ಲಿ** ತಮ್ಮ ಹೆಸರು ನೋಂದಾಯಿಸಿರುವ, ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ಕುಸುಗಲ್ಲ ಸರ್ಕಾರಿ ಪ್ರೌಢಶಾಲೆಯ, ವಿಜ್ಞಾನ ಶಿಕ್ಷಕ, ಸಂಜೀವಕುಮಾರ ಭೂಶೆಟ್ಟಿ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

**ಸಂಜೀವಕುಮಾರ ಭೂಶೆಟ್ಟಿ ಧ್ವನಿ 48 ಸೆಕೆಂದುಗಳು**

<><><>

**ರಾಷ್ಟ್ರೀಯ ಆವಿ ್ಕಾರ ಅಭಿಯಾನ,** ಸಮಗ್ರ ಶಿಕ್ಷಣ ರಸಪ್ರಶ್ನೆ ಸ್ಪರ್ಧೆಯಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆ, ಶಿಡ್ಲಘಟ್ಟ ತಾಲೂಕು, ಯಣ್ಣಂಗೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ, ಐದನೇ ತರಗತಿ ವಿದ್ಯಾರ್ಥಿನಿ, ಅಕ್ಷಯಾ ರಾಜ್ಯಕ್ಕೆ ಪ್ರಥಮ ಸ್ಥಾನಗಳಿಸಿದ್ದಾರೆ. ಉತ್ತರಪ್ರದೇಶ ಮೂಲದ ಅಕ್ಷಯಾ, ಯಣ್ಣಂಗೂರು ಸರ್ಕಾರಿ ಶಾಲೆಯಲ್ಲಿ, ಐದನೇ ತರಗತಿ ವ್ಯಾಸಂಗ ಮಾಡುತ್ತಿದ್ದು, ಅವರ ಪೋ ಕರು, ಕಳೆದ 12 ವ ರ್ಗಳಿಂದ ಯಣ್ಣಂಗೂರು ಗ್ರಾಮದ ನಿವಾಸಿಯಾಗಿದ್ದಾರೆ. ಶಾಲಾ ಶಿಕ್ಷಣ ಇಲಾಖೆ, ಉಪ ನಿರ್ದೇಶಕ, ವಿ.ರಮೇಶ ಪ್ರಥಮ ಸ್ಥಾನ ಪಡೆದ, ಅಕ್ಷಯಾ ಅವರನ್ನು, ಅಭಿನಂದಿಸಿದ್ದಾರೆ.

<><><>

**ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..**

**(40 ಸೆಕೆಂದುಗಳು)**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**ನ್ಯಾಶನಲ್ ಕೆಡೆಟ್ ಕಾರ್ಪ್ಸ್ – ಎನ್.ಸಿ.ಸಿ.** ಕೆಡೆಟ್‌ಗಳು, ಶಿಸ್ತು ಮತ್ತು ರಾಷ್ಟ್ರ ಪ್ರೇಮದ ಪ್ರತೀಕವಾಗಿದ್ದಾರೆ ಎಂದು, ರಾಜ್ಯಪಾಲ ಥಾವರಚಂದ್ ಗೆಹ್ಲೋಟ ಶ್ಲಾಘಿಸಿದ್ದಾರೆ. ಗಣರಾಜ್ಯೋತ್ಸವ ಕವಾಯತಿನಲ್ಲಿ ಭಾಗವಹಿಸಿ, ಐತಿಹಾಸಿಕ ಸಾಧನೆಗೈದ, ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯದ, ಎನ್.ಸಿ.ಸಿ. ಕೆಡೆಟ್‌ಗಳನ್ನು ಅಭಿನಂದಿಸಲು, ಲೋಕಭವನದ ಗಾಜಿನ ಮನೆಯಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ, ಅವರು ಮಾತನಾಡಿದರು. ಕರ್ನಾಟಕ ಮತ್ತು ಗೋವಾ ಎನ್.ಸಿ.ಸಿ. ನಿರ್ದೇಶನಾಲಯದ ತಂಡ, ಸತತವಾಗಿ ಎರಡನೇ ಬಾರಿಗೆ, 'ಚಾಂಪಿಯನ್' ಆಗಿ ಹೊರಹೊಮ್ಮಿ, ಐತಿಹಾಸಿಕ ಸಾಧನೆ ತೋರಿದೆ. ಪ್ರಧಾನಮಂತ್ರಿಯವರ ಬ್ಯಾನರ್ ಗೌರವ, ತಂಡ ಭಾವನೆ ಮತ್ತು ನಾಯಕತ್ವಕ್ಕೆ ಸಾಕ್ಷಿ, ಎಂದರು. ಉನ್ನತ ಶಿಕ್ಷಣ ಖಾತೆ ಸಚಿವ, ಎಂ.ಸಿ. ಸುಧಾಕರ ಮಾತನಾಡಿ, ರಾಜ್ಯದಲ್ಲಿ ಎನ್.ಸಿ.ಸಿ ಬಲವರ್ಧನೆಗೆ ಸರ್ಕಾರ, ಪ್ರಸ್ತುತ ಕೆಡೆಟ್‌ಗಳ ಸಂಖ್ಯೆಗೆ ಹೆಚ್ಚುವರಿಯಾಗಿ, 16 ಸಾವಿರ ಕೆಡೆಟ್‌ಗಳನ್ನು ಸೇರಿಸಿಕೊಳ್ಳಲು, ಅನುಮೋದಿಸಿದೆ ಎಂದರು.

<><><>

**ಪ್ರತಿ ಪೊಲೀಸ್ ಠಾಣೆಯಿಂದ,** ಪ್ರತಿ ತಿಂಗಳು ಮೂರನೇ ಶನಿವಾರ, 16 ವರ್ಷದೊಳಗಿನ ಮಕ್ಕಳಿಗಾಗಿ, ತೆರೆದ ಮನೆ ಕಾರ್ಯಕ್ರಮ, ಕಡ್ಡಾಯವಾಗಿ ಆಯೋಜಿಸುವಂತೆ, ರಾಜ್ಯ ಮಕ್ಕಳ ಹಕ್ಕುಗಳ ಆಯೋಗದ ಸದಸ್ಯ, ಕೆ.ಟಿ. ತಿಪ್ಪೇಸ್ವಾಮಿ, ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಉತ್ತರಕನ್ನಡ ಜಿಲ್ಲೆ, ಕಾರವಾರದ, ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿಯಲ್ಲಿ, ಕಾರವಾರ ಉಪ ವಿಭಾಗದ, ಮಕ್ಕಳ ಕಲ್ಯಾಣಾಧಿಕಾರಿ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ, ಪದಾಧಿಕಾರಿಗಳೊಂದಿಗೆ, ಅವರು ಸಭೆ ನಡೆಸಿದರು. ಮಕ್ಕಳ ಸಹಾಯವಾಣಿ ಸಂಖ್ಯೆ 1–0–9–8, ತುರ್ತು ಸಹಾಯವಾಣಿ 1–1–2 ಪೋಸ್ಕೋ, ಬಾಲ್ಯ ವಿವಾಹ, ಮಕ್ಕಳ ಕಳ್ಳ ಸಾಗಣೆ, ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ಬಗ್ಗೆ, ಮಕ್ಕಳಲ್ಲಿ ಹಾಗೂ ಪದವಿ ಹಂತದ ವರೆಗಿನ ವಿದ್ಯಾರ್ಥಿಗಳಲ್ಲೂ, ಜಾಗೃತಿ ಮೂಡಿಸುವಂತೆ, ನಿರ್ದೇಶಿಸಿದರು.

<><><>

**ಎಸ್.ಎಸ್.ಎಲ್.ಸಿ. ಪೂರ್ವಭಾವಿ** ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸಲು,ಕಿತ್ತೂರು ಕರ್ನಾಟಕ ಶೈಕ್ಷಣಿಕ ವಲಯದ, ಎಲ್ಲ 9 ಡಯಟ್ ಪ್ರಾಚಾರ್ಯರಿಗೆ, ಶಾಲೆಗಳಿಗೆ ಭೇಟಿ ನೀಡಿ, ಖುದ್ದು ಪರಿಶೀಲಿಸಿ ವರದಿ ನೀಡುವಂತೆ, ಶಾಲಾ ಶಿಕ್ಷಣ ಇಲಾಖೆಯ, ಕಿತ್ತೂರು ಕರ್ನಾಟಕ ಶೈಕ್ಷಣಿಕ ವಲಯದ, ಬೆಳಗಾವಿ ವಿಭಾಗದ ಅಪರ ಆಯುಕ್ತ, ಈಶ್ವರ ಉಳ್ಳಾಗಡ್ಡಿ ಸೂಚಿಸಿದ್ದಾರೆ. ವಿಜಯಪುರ, ಬಾಗಲಕೋಟೆ, ಬೆಳಗಾವಿ, ಉತ್ತರಕನ್ನಡ, ಧಾರವಾಡ, ಗದಗ, ಹಾವೇರಿ, ಶಿರಸಿ ಹಾಗೂ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಗಳ, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಸಭೆ ಜರುಗಿಸಿ, ಪ್ರಮಾಣಿತ ಕಾರ್ಯಾಚರಣೆ ವಿಧಾನ ತಿಳಿಸಲಾಗಿದೆ, ಎಂದು, ಈಶ್ವರ ಉಳ್ಳಾಗಡ್ಡಿ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

**ಈಶ್ವರ ಉಳ್ಳಾಗಡ್ಡಿ ಧ್ವನಿ 40 ಸೆಕೆಂದುಗಳು**

<><><>

**ರಾಯಲ್ ಚಾಲೆಂಜರ್ಸ್ ಬೆಂಗಳೂರು,**ವನಿತೆಯರ ತಂಡ, ಮಹಿಳೆಯರ ಪ್ರೀಮಿಯರ್ ಲೀಗ್ ಟಿ–20 ಕ್ರಿಕೆಟ್ ಟೂರ್ನಿಯಲ್ಲಿ, ಎರಡನೇ ಬಾರಿ ಚಾಂಪಿಯನ್ ಆಗಿದೆ. ಡೆಲ್ಲಿ ಕ್ಯಾಪಿಟಲ್ಸ್ ತಂಡ, ಸತತ ನಾಲ್ಕನೇ ಸಲ, ರನ್ನರ್ಸ್ ಅಪ್ ಆಯಿತು.

ವಡೋದರದ, ಕೊತಂಬಿ ಕ್ರೀಡಾಂಗಣದಲ್ಲಿ ಜರುಗಿದ, ಡಬ್ಲ್ಯು.ಪಿ.ಎಲ್ ಫೈನಲ್ ಪಂದ್ಯದಲ್ಲಿ, ಸ್ಮೃತಿ ಮಂದಾನ 41 ಎಸೆತಗಳಲ್ಲಿ 87 ರನ್, ಜಾರ್ಜಿಯಾ ವೊಲ್ 54 ಎಸೆತಗಳಲ್ಲಿ 79 ರನ್ ಗಳಿಸುವ ಮೂಲಕ, ಡೆಲ್ಲಿ ಕ್ಯಾಪಿಟಲ್ಸ್ ತಂಡ ನೀಡಿದ್ದ, 204 ರನ್‌ಗಳ ಗುರಿ ತಲುಪಿ, ಆರ್.ಸಿ.ಬಿ ಜಯ ಸಾಧಿಸಿತು.

<><><>

**ಸ್ಕೂಲ್ ಗೇಮ್ಸ್ ಫೆಡರೇಷನ್ ಆಫ್ ಇಂಡಿಯಾ,** ಹೊಸ ದಿಲ್ಲಿಯ, ಛತ್ರಿ ಶಾಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ, ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ, 39 ಕಿಲೋ ತೂಕದ ವಿಭಾಗದಲ್ಲಿ, ಧಾರವಾಡ ಕ್ರೀಡಾ ಶಾಲೆಯ, ಪ್ರಭಾವತಿ ಲಂಗೂಟಿ, ಸತತ ಎರಡನೇ ವರ್ಷ, ಪ್ರಥಮ ಸ್ಥಾನ ಗಳಿಸಿದ್ದಾರೆ. ಚಿನ್ನದ ಪದಕ ವಿಜೇತ, ಪ್ರಭಾವತಿ ಅವರಿಗೆ, ಧಾರವಾಡ ಜಿಲ್ಲೆ, ಪ್ರಬಾರ ಜಿಲ್ಲಾಧಿಕಾರಿ ಭುವನೇಶ ಪಾಟೀಲ, ಸನ್ಮಾನಿಸಿ, ಗೌರವಿಸಿದರು.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು**

<><><>

- **ಬೆಂಗಳೂರಿನಲ್ಲಿ, ಇಂದಿನಿಂದ ಮೂರು ದಿನ,** ಸಿರಿಧಾನ್ಯ ಹಾಗೂ ಸಾವಯವ ಕೃಷಿಕರ ಮೇಳ.
- **9ನೇ ಆವೃತ್ತಿಯ,** 'ಪರೀಕ್ಷಾ ಪೇ ಚರ್ಚಾ'; ಇಂದು ಬೆಳಗ್ಗೆ 10 ಗಂಟೆಗೆ, ಪ್ರಸಾರ.
- **ಎನ್.ಸಿ.ಸಿ., ಶಿಸ್ತು ಮತ್ತು ರಾಷ್ಟ್ರ** ಪ್ರೇಮದ ಪ್ರತೀಕ – ರಾಜ್ಯಪಾಲ ಥಾವರಚಂದ್ ಗೆಹ್ಲೋಟ.
- **ಪ್ರೀಮಿಯರ್ ಲೀಗ್ ಟಿ–20 ಕ್ರಿಕೆಟ್;** ರಾಯಲ್ ಚಾಲೆಂಜರ್ಸ್ ಬೆಂಗಳೂರು, ವನಿತೆಯರ ತಂಡಕ್ಕೆ ಜಯ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>